# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 14-08-2024 ರಂದು ಮಾನ್ಯ ವಿಶೇಷ ಆಯುಕ್ತರು ಅರಣ್ಯ ಪರಿಸರ ಮತ್ತು ಹವಮಾನ ವೈಪರೀತ್ಯ ನಿರ್ವಹಣೆ, ಬಿಬಿಎಂಪಿ ರವರ ಅಧ್ಯಕ್ಷತೆಯಲ್ಲಿ ಬೆಂಗಳೂರು ಹವಾಮಾನ ಕ್ರಿಯಾಯೋಜನೆ ಫೆಲೋಶಿಪ್ ಕಾರ್ಯಕ್ರಮದ ಕುರಿತು ನಡೆದ ಸಭೆಯ ನಡುವಳಿಗಳು.**

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:

1. ಶ್ರೀಮತಿ. ಪ್ರೀತಿ ಗೆಹ್ಲೋಟ್, ವಿಶೇಷ ಆಯುಕ್ತರು (ಅ,ಪ,ಹ,ವೈ,ನಿ) ಹಾಗೂ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ
2. ಶ್ರೀ. ಎಂ ಶಿವಕುಮಾರ್, ಮುಖ್ಯ ಲೆಕ್ಕಾಧೀಕ್ಷಕರು ರವರ ಕಛೇರಿ, ಬಿಬಿಎಂಪಿ
3. ಶ್ರೀ ಬಸವರಾಜು, ಕಾನೂನು ಕೋಶ, ಬಿಬಿಎಂಪಿ
4. ಶ್ರೀ ವಿಜಯಕುಮಾರ್ ಹರಿದಾಸ, ಮುಖ್ಯ ಅಭಿಯಂತರರು, ಕೆರೆಗಳು, ಬಿ.ಬಿ.ಎಂ.ಪಿ
5. ಶ್ರೀಮತಿ ಮೇಘ ಹೆಚ್ ಎಸ್, ಕಾ.ಪಾ.ಅ ಕೆರೆಗಳು, ಬಿಬಿಎಂಪಿ
6. ಶ್ರೀ. ರಾಹುಲ್, ಮಾಹಿತಿ ತಂತ್ರಜ್ಞಾನ ಇಲಾಖೆ, ಬಿಬಿಎಂಪಿ

*************

ವಿಶೇಷ ಆಯುಕ್ತರು (ಅಪಹವೈನಿ) ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿಗಳು ಸ್ವಾಗತಿಸುತ್ತಾ, ಪಾಲಿಕೆಯ ಹವಮಾನ ಕ್ರಿಯಾಕೋಶದ ಫೆಲೋಷಿಪ್ ಕ್ರಾರ್ಯಕ್ರಮದ ಅರ್ಜಿ ಪರಿಶೀಲನಾ ಸಮಿತಿಯ ಈ ಹಿಂದಿನ ಸಭೆಯ ನಡುವಳಿಗಳ ಬಗ್ಗೆ ಮಾಹಿತಿಯನ್ನು ನೀಡಿದರು.

ದಿನಾಂಕ:08-08-2024 ರಂದು ನಡೆದ ಸಭೆಯಲ್ಲಿ ಸದರಿ ಫೆಲೋಶಿಪ್ ಕಾರ್ಯಕ್ರಮದ ಅಡಿಯಲ್ಲಿ ಫೆಲೋಗಳನ್ನು ಆಯ್ಕೆ ಮಾಡಲು ಯಾವ ರೀತಿಯ ಪರೀಕ್ಷೆ ನಡೆಸಬೇಕೆಂಬ ಬಗ್ಗೆ ಚರ್ಚಿಸಲಾಯಿತು. ಕಂಪ್ಯೂಟರ್ ಆಧಾರಿತ ಪರೀಕ್ಷೆ ನಡೆಸುವ ಬಗ್ಗೆ ಹಾಗೂ ಆಪ್ ಲೈನ್ ಮುಖಾಂತರ ಮ್ಯಾನ್ಯುಯಲ್ ಆಗಿ ಪರೀಕ್ಷೆ ನಡೆಸುವ ಸಾಧಕ ಬಾದಕಗಳು ಹಾಗೂ ವೆಚ್ಚಗಳ ಬಗ್ಗೆ ಚರ್ಚಿಸಲಾಯಿತು. ನಂತರ ಆಯ್ಕೆಯನ್ನು ಪಾರದರ್ಶಕವಾಗಿ ಹಾಗೂ ನಿಗದಿತ ಸಮಯದಲ್ಲಿ ಕಂಪ್ಯೂಟರ್ ಆಧಾರಿತ ಪರೀಕ್ಷೆ ನಡೆಸುವುದು ಸೂಕ್ತವೆಂದು ತೀರ್ಮಾನಿಸಲಾಯಿತು.

ಅದರಂತೆ, ಆಯ್ಕೆಯಾದ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ:29-08-2024ರಂದು ಕಂಪ್ಯೂಟರ್ ಆಧಾರಿತ ಪರೀಕ್ಷೆ ನಡೆಸಲು ಸಂಬಂಧಪಟ್ಟ ಏಜೆನ್ಸಿಗಳಿಂದ ಕೋಟೇಷನ್ ಪಡೆಯಲು ಸೂಚಿಸಿರುವ ಮೇರೆಗೆ ದಿನಾಂಕ: 08-08-2024 ರಂದು ಕೋಟೇಷನ್ ಆಹ್ವಾನಿಸಲಾಗಿದ್ದು, ಕನಿಷ್ಠ ದರ ರೂ.1,00,000/- ಗಳನ್ನು (ಎಲ್ಲಾ ತೆರಿಗೆಗಳು ಸೇರಿ) ನಮೂದಿಸಿದ M/s. Vsion Tech park ರವರಿಗೆ ಕಾರ್ಯದೇಶ ನೀಡಲು ಅನುಮೋದನೆ ನೀಡಲಾಯಿತು.

ಫೆಲೋಶಿಪ್ ಕಾರ್ಯಕ್ರಮದ ಅಡಿಯಲ್ಲಿ ಫೆಲೋಗಳಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ Knowledge partner ಆದ M/s. Reap ಸಂಸ್ಥೆಯವರು ಒಟ್ಟು 442 ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ 311 ಅರ್ಜಿಗಳು ಅನರ್ಹರಾಗಿದ್ದು, ಮೊದಲನೇ ಸುತ್ತಿನಲ್ಲಿ 131 ಅರ್ಹ ಅಭ್ಯರ್ಥಿಗಳ ಅರ್ಜಿಗಳನ್ನು short list ಮಾಡಿ ಸಲ್ಲಿಸಿದ್ದು ಅದರಂತೆ M/s. Reap ಸಂಸ್ಥೆಯವರು ಸಲ್ಲಿಸಿರುವ ಅರ್ಹ ಹಾಗೂ ಅನರ್ಹ ಅಭ್ಯರ್ಥಿಗಳಿಗೆ ಇ-ಮೇಲ್ ಮುಖಾಂತರ ಮಾಹಿತಿಯನ್ನು ನೀಡಲು ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಿಶೇಷ ಆಯುಕ್ತರು
ಅರಣ್ಯ ಪರಿಸರ ಹವಾಮಾನ ವೈಪರೀತ್ಯ ನಿರ್ವಹಣೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
2. ಮಾನ್ಯ ಮುಖ್ಯ ಆಯುಕ್ತರು ಬಿಬಿಎಂಪಿ, ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಉಪ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಕಳುಹಿಸಿದೆ.
4. ಮುಖ್ಯ ಲೆಕ್ಕಾಧಿಕಾರಿಗಳು ರವರ ಮಾಹಿತಿಗಾಗಿ ಕಳುಹಿಸಿದೆ.
5. ಕಾನೂನು ಕೋಶದ ಮುಖ್ಯಸ್ಥರು, ರವರ ಮಾಹಿತಿಗಾಗಿ ಕಳುಹಿಸಿದೆ.
6. ಕಛೇರಿ ಕಡತಕ್ಕೆ.